ಈ ಮೇಲಿನ ಪರಿಷ್ಕೃತ ಗೌರವಧನವನ್ನು ನೀಡುವ ಬಗೆಗಿನ ಆದೇಶ ಇಂದೇ ಹೊರಡಲಿದೆ ಹಾಗೆಯೇ ಆಂಗನವಾಡಿ ಕಾರ್ಯಕರ್ತೆಯರಿಗೆ ಕನಿಷ್ಠ ಸೌಲಭ್ಯ ಒದಗಿಸಲು ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳುವುದು.

ರಾಜ್ಯ ಯೋಜನೆಗಳಲ್ಲೂ ೧೦೦೦ ಜನಸಂಖ್ಯೆಗೆ ೧ ಆಂಗನವಾಡಿಯಂತೆ ಆಂಗನವಾಡಿ ಕೇಂದ್ರಗಳನ್ನು ಮಂಜೂರುಮಾಡುವ ದಿನಗಳಲ್ಲಿ ಆರಂಭಿಸಲು ಪ್ರಯತ್ನಿಸಲಾಗುವುದು.

ಈ ರೀತಿ ಸರ್ಕಾರ ತೆರೆದ ಮನಸ್ಸಿನಿಂದ ಆಂಗನವಾಡಿ ಕಾರ್ಯಕರ್ತೆಯರ ಬೇಡಿಕೆಗಳನ್ನು ಉದಾರ ಮನಸ್ಸಿನಿಂದ ಮಾನ್ಯ ಮಾಡಿದೆ. ಇದಕ್ಕೆ ಪ್ರತಿಯಾಗಿ ಸರ್ಕಾರ ಆಂಗನವಾಡಿ ಕಾರ್ಯಕರ್ತೆಯರೂ ತಮ್ಮ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿ, ಸಾರ್ವಜನಿಕರ ಮತ್ತು ಸರ್ಕಾರದ ಮನಮೆಚ್ಚುವಂತೆ ಕೆಲಸ ಮಾಡುವರಾಗಿ ಆಶಿಸುತ್ತದೆ.

ಗಮನ ಸೆಳೆಯುವ ಸೂಚನೆ

ತೀರ್ಥಹಳ್ಳಿ ತಾಲ್ಲೂಕಿನ ಕೆಲವು ಹಳ್ಳಿಗಳಲ್ಲಿ ಬರಗಾಲ ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳುವುದು

೧೨-೩೦ ಪಿ.ಎಂ.

ಶ್ರೀ ಪಟಮಕ್ಕಿರಪ್ಪ ಕರ್.— ಮಾನ್ಯ ಅಧ್ಯಕ್ಷರೇ, ತೀರ್ಥಹಳ್ಳಿ ತಾಲ್ಲೂಕಿನ ಬರಗಾಲಕ್ಕೆ ತುತ್ತಾಗಿರುವ ಹಳ್ಳಿಗಳಲ್ಲಿ ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳದಿರುವ ಬಗ್ಗೆ ಮಾನ್ಯ ಕಂದಾಯ ಯೋಜನೆ ಹಾಗೂ ಕಾರ್ಮಿಕ ಮಂತ್ರಿಯವರ ಗಮನವನ್ನು ಸೆಳೆಯುಬಯಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಮಾನ್ಯ ಕಂದಾಯ ಯೋಜನೆ ಹಾಗೂ ಕಾರ್ಮಿಕ ಮಂತ್ರಿಗಳು).—

೧೯೮೬-೮೭ನೇ ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ೨೦ ಹಳ್ಳಿಗಳನ್ನು ಬರಗಾಲ ಪೀಡಿತವೆಂದು ಗುರುತಿಸಲಾಗಿದೆ. ಈ ಹಳ್ಳಿಗಳ ೬೬,೧೧೫ ಜನರೂ ಬರಗಾಲ ಬವಣೆಗೆ ಗುರಿಯಾಗಿದ್ದಾರೆ. ಬರಗಾಲ ಪರಿಸ್ಥಿತಿಯನ್ನು ಎದುರಿಸಲು ಅಲ್ಲಿನ ಜನತೆಗೆ ಸರ್ಕಾರವು ಸರ್ವವಿಧದ ಸಹಾಯವನ್ನು ನೀಡುತ್ತಿದೆ. ಭತ್ತದ ಬೆಳೆ ನಾಶವಾದ ಕಡೆಯಲ್ಲಿ ಪರ್ಯಾಯ ಬೆಳೆ ತೆಗೆಯಲು ಬೀಜ ಗೊಬ್ಬರಗಳನ್ನು ಒದಗಿಸುವುದಕ್ಕಾಗಿ ಶಿವಮೊಗ್ಗ ಜಿಲ್ಲೆಗೆ ೫-೦೦ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಅಲ್ಲದೆ, ಬರಪೀಡಿತ ಹಳ್ಳಿಗಳಲ್ಲಿ ಬರಗಾಲ ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳುವ ಸಲುವಾಗಿ ಶಿವಮೊಗ್ಗ ಜಿಲ್ಲೆಗೆ ಬರ ಪರಿಹಾರ ಶೀರ್ಷಿಕೆಯ ಕೆಳಗೆ ೧೯೮೬ರ ಡಿಸೆಂಬರ್‌ನಲ್ಲಿ ನಾಲ್ಕು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಮಂಜೂರಾತ್ತ ಕಾಮಗಾರಿಗಳು ಮಂಜೂರಾಗಿದ್ದು, ಅವುಗಳು ಪ್ರಗತಿಯಲ್ಲಿವೆ. ತೀರ್ಥಹಳ್ಳಿ ತಾಲ್ಲೂಕಿನ ೭೬,೭೭೧ ಜಾನುವಾರುಗಳು ತೊಂದರೆಗೊಳಗಾದುದರಿಂದ ಒಂದು ಮೇವು ಬ್ಯಾಂಕನ್ನು ಸ್ಥಾಪಿಸಲಾಗಿತ್ತು. ಈ ತಾಲ್ಲೂಕಿನಲ್ಲಿ ಉದ್ಯೋಗ ಸೃಜನೆಗೆ ೧.೪೧ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿ ೩,೬೮೧ ಮಾನವ ದಿನಗಳನ್ನು ಸೃಜಿಸಲಾಗಿದೆ ರೆಗ್ಯುಲರ್ ಎನ್.ಆರ್.ಇ.ಪಿ.ಗೆ ೫.೧೫ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿ ೨೮,೬೯೧ ಮಾನವ ದಿನಗಳನ್ನು ಹಾಗೂ ಆರ್.ಎಲ್.ಇ.ಜಿ.ಪಿ. ಯೋಜನೆಯಡಿಯಲ್ಲಿ ೬.೨೦೨ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿ ೪೪.೦೩೬ ಮಾನವ ದಿನಗಳನ್ನು ಸೃಜಿಸಲಾಗಿದೆ. ಇದಲ್ಲದೆ ಇತರೇ ಇಲಾಖಾ ಯೋಜನಾ ಕಾರ್ಯಕ್ರಮಗಳಡಿಯಲ್ಲಿ ದೊರೆಯುವ ಹಣವನ್ನು ಉಪಯೋಗಿಸಿಕೊಂಡು ಪರಿಹಾರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವಂತೆ ಈಗಾಗಲೇ ಆದೇಶಗಳನ್ನು ಹೊರಡಿಸಲಾಗಿದೆ.

ಶಿವಮೊಗ್ಗ ಜಿಲ್ಲೆಯ ಬರ ಪರಿಹಾರ ಕಾರ್ಯಕ್ರಮಗಳಿಗೆ ಈ ಕೆಳಕಂಡಂತೆ ಹಣ ಬಿಡುಗಡೆಯಾಗಿದೆ.

(ಲಕ್ಷ ರೂಪಾಯಿಗಳಲ್ಲಿ)

ಎನ್‌ಆರ್‌ಇಪಿ	ಆರ್‌ಎಲ್‌ಇಜಿಪಿ	ಕೂಸ ಕಾಮಗಾರಿ	ಕೃಷಿ ಮಿನಿ ಕಿಟ್	ಕಂಡಿಯುವ ನೀರಿನ ಯೋಜನೆಗಳಿಗೆ ಮುಖ್ಯಮಂತ್ರಿ ಯವರ ನಿಧಿಯಿಂದ	ಬರಪರಿಹಾರ ಶಿಬಿರಗಳಲ್ಲಿ ಒಟ್ಟು	ಬರ ಪರಿಹಾರ ಹಾಗೂ ಯೋಜನೆ ಯಡಿಯಲ್ಲಿ
೮೩.೯೬	೮೦.೫೪	೪.೦೦	೫.೦೦	೧೪.೦೦	೧೬೪.೬೨	೩೬೫.೩೧

ಜಿಲ್ಲಾಧಿಕಾರಿಯವರಿಗೆ ಅವಶ್ಯವಿರುವ ಪ್ರದೇಶಗಳಲ್ಲಿ ಅಭಾವ ಪರಿಹಾರ ಕಾರ್ಯಕ್ರಮಗಳನ್ನು ಪರಿಸ್ಥಿತಿ ಉತ್ತಮಗೊಳ್ಳುವವರೆಗೆ ಮುಂದುವರಿಸಿಕೊಂಡು ಬರಲು ಆದೇಶಿಸಲಾಗಿದೆ.

ಶ್ರೀ ಪಟಪಮಕ್ಕಿ ರತ್ನಾಕರ್.—ತೀರ್ಥಹಳ್ಳಿಯಲ್ಲಿ ಮೇವಿನ ಬ್ಯಾಂಕ್ ಅನ್ನು ಸ್ಥಾಪನೆ ಮಾಡಿದ್ದೆ. ವೆಂದು ತಮ್ಮ ಹೇಳಿಕೆಯಲ್ಲಿ ಕೊಟ್ಟಿದ್ದಾರೆ. ಪ್ರಾಯಶಃ ಇದು ನನ್ನ ಗಮನಕ್ಕೆ ಬಂದ ಹಾಗೆ ಇಲ್ಲ. ಜೊತೆಗೆ ಆರ್.ಎಲ್.ಇ.ಜಿ.ಪಿ., ಎನ್.ಆರ್.ಇ.ಪಿ., ಕಾರ್ಯಕ್ರಮಗಳನ್ನು ಕೈಗೊಂಡಿದ್ದೇವೆಂದು ಹೇಳುತ್ತೀರಿ. ರೆಗ್ಯುಲರ್ ಕೋರ್ಸ್‌ನಲ್ಲಿ ಕೈಗೊಂಡಿದ್ದು ನಿಜ. ತೀರ್ಥಹಳ್ಳಿ, ಹೊಸನಗರದ ಸರ ಹದ್ದುಗಳಿಗೆ ಬರ ಪರಿಹಾರಕ್ಕೋಸ್ಕರವಾಗಿ ಮಂಜೂರು ಮಾಡಿರತಕ್ಕಂತಹ ಎನ್‌ಆರ್‌ಇಪಿ, ಆರ್‌ಎಲ್‌ಇಜಿಪಿ ಕಾರ್ಯಕ್ರಮಗಳು ಯಾವುದು ಇಲ್ಲ. ಮಾನ್ಯ ಸಚಿವರು ದಯವಿಟ್ಟು ಗಮನಿಸಬೇಕು, ಈ ದೃಷ್ಟಿಕೋನಗಳಿಂದಾಗಿ ೧೫೦ ಹಳ್ಳಿಗಳು ಹಾನಿಗೆ ಈಡಾಗಿದೆ,

ತಾವು ಈ ಕುಡಿಯುವ ನೀರಿನ ಬಗ್ಗೆ ಹೆಚ್ಚಿನ ಗಮನವನ್ನು ಹರಿಸಬೇಕು. ತಾವು ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ಕೊಡಬೇಕು,ಜೊತೆಗೆ ನಮ್ಮ ತೀರ್ಥಹಳ್ಳಿ ಮತ್ತು ಹೊಸನಗರಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಿಗೆ ಇದೆ. ಅಲ್ಲಿ ಕೊಳವೆ ಬಾವಿಗಳು ಹೆಚ್ಚು ಯಶಸ್ವಿಯಾಗತಕ್ಕಂಥದ್ದು ಕಡಿಮೆ. ಕೆಲವು ಜಾಗಗಳನ್ನು ಈಗಾಗಲೇ ಅಧಿಕಾರಿಗಳು ತಿಳಿಸಿದ್ದಾರೆ. ಆದ್ದರಿಂದ ಇಂಥ ಜಾಗಗಳಲ್ಲಿ ತೆರೆದ ಬಾವಿಗಳನ್ನು ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಹೆಚ್ಚು ಮಾಡತಕ್ಕಂಥದ್ದರ ಬಗ್ಗೆ ಸರ್ಕಾರ ಗಮನ ಕೂಡ ಬೇಕೆಂದು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ ಕೆಲವು ಗ್ರಾಮೀಣ ಪ್ರದೇಶಗಳಲ್ಲಿ ರಿಗ್‌ಗಳು ಕೂಡಾ ಇದ್ದರೂ ಪ್ರಯೋಜನವಾಗಿಲ್ಲ. ಬಂಗಿಗಾಲದಲ್ಲಿ ಮಾತ್ರ ಸ್ವಲ್ಪ ಚೆನ್ನಾಗಿದ್ದು ಬೇಸಿಗೆ ಕಾಲದಲ್ಲಂತೂ ಏನೂ ಪ್ರಯೋಜನವಾಗುವುದಿಲ್ಲ. ಆದ್ದರಿಂದ ಸರ್ಕಾರ ತೆರೆದ ಬಾವಿಗಳಿಗೆ ಹೆಚ್ಚು ಗಮನ ಹರಿಸ ಬೇಕೆಂದು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ —ಮಾನ್ಯ ಸಭಾಪತಿಗಳೇ, ಅವರು ಹೇಳಿದಂತೆ ಶಿವಮೊಗ್ಗದ ಬೇರೆ ತಾಲ್ಲೂಕುಗಳಲ್ಲಿಯೂ ಮತ್ತು ಅದೇ ರೀತಿ ಧಾರವಾಡ ಜಿಲ್ಲೆಯಲ್ಲಿ, ಬೆಳಗಾಂ ಜಿಲ್ಲೆಯಲ್ಲಿ, ಉತ್ತರ ಕನ್ನಡ ಜಿಲ್ಲೆಯಲ್ಲಿ, ಮಲೆನಾಡು ಪ್ರದೇಶಗಳಲ್ಲಿ ಭತ್ತ ಬೆಳೆಯತಕ್ಕಂಥದ್ದರಲ್ಲಿ ಬೆಳೆ ಹಾಳಾಗಿದೆ. ಈ ಬಗ್ಗೆ ಸರ್ಕಾರ ಈಗಾಗಲೇ ಅಧಿಕಾರಿಗಳಿಂದ ಅಂಕಿಸಂಖ್ಯೆಗಳನ್ನು ತರಿಸಿಕೊಂಡಿದೆ. ವಿಶೇಷವಾಗಿ ಬರಗಾಲದ ಈ ಒಂದು ಅಡಿಯಲ್ಲಿ ಹೆಚ್ಚಿನ ಹಣವನ್ನು ಬಿಡುಗಡೆ ಮಾಡತಕ್ಕಂಥ ಅವಶ್ಯಕತೆ ಇದೆ. ಆದಷ್ಟು ಬೇಗ ಹಣವನ್ನು ಬಿಡುಗಡೆ ಮಾಡಿ ಕೆಲಸವನ್ನು ಪ್ರಾರಂಭಮಾಡುತ್ತೇವೆ. ಕುಡಿಯುವ ನೀರಿನ ಬಗ್ಗೆ ಒಂದು ಮಾತನ್ನು ಹೇಳಿದ್ದಾರೆ, ಅವರ ಅವಶ್ಯಕತೆಯೂ ಬಿದ್ದರೆ ಕೆಲವೊಂದು ತೆರೆದ ಬಾವಿ ಗಳನ್ನು ಮಾಡಲಿಕ್ಕೆ ಪರಿಶೀಲನೆ ಮಾಡುತ್ತೇವೆ.

ಅಧ್ಯಕ್ಷರು.—ಮಾನ್ಯ ವೀರಯ್ಯಸ್ವಾಮಿ ಮಂತರ್ತು ನಾರಾಯಣಕುಮಾರ್ ಇವರುಗಳ ಕಾಲಿಂಗ್ ಅಟೆನ್‌ಷನ್‌ಗಳನ್ನು ಡ್ಯೂರಿಂಗ್ ದಿ ಕೋರ್ಸ್ ಆಫ್ ಡೇ ತೆಗೆದುಕೊಳ್ಳೋಣ.

ಶ್ರೀ ಜಿ. ನಾರಾಯಣಕುಮಾರ್.—ಅಲ್ಲಿ ಅವರು ಅವಂರಣಾಂತ ಉಪವಾಸ ಮಾಡುತ್ತಿದ್ದಾರೆ. ಇದನ್ನು ಎಷ್ಟು ಹೊತ್ತಿಗೆ ತೆಗೆದುಕೊಳ್ಳುತ್ತೀರಿ ?

ಅಧ್ಯಕ್ಷರು.—ಚೀಫ್ ಮಿನಿಸ್ಟರ್ ಕೌನ್ಸಿಲ್‌ನಲ್ಲಿ ಇದ್ದಾರೆ, ಅವರು ಬಂದ ಕೂಡಲೇ ಉತ್ತರ ಕೊಡಿಸುತ್ತೇನೆ.

ಶ್ರೀ ಎಸ್. ಆರ್, ಬೊಮ್ಮಾಯಿ.—ಮಾನ್ಯ ಸದಸ್ಯರಾದ ಅಡ್ಯಂತಾಯ್‌ರವರಿಗೆ ಈ ದಿವಸ ಹೇಳಿಕೆಯನ್ನು ಕೊಡುತ್ತೇನೆ ಎಂದು ಹೇಳಿದ್ದೆ. ದುರ್ದೈವದಿಂದ ಈ ಭೊರೂಕಾ ಮಿಲ್ ಏನು ಇದೆ, ಅಲ್ಲಿ ದುರ್ಘಟನೆ ನಡೆದು...

ಅಧ್ಯಕ್ಷರು.—ಸನ್ಮಾನ್ಯ ಬೊಮ್ಮಾಯಿಯವರೇ, ಅದು ಕಾಲಿಂಗ್ ಅಟೆನ್‌ಷನ್ನೋ, ಅಥವಾ ೩೩ಳಿರ ನಿಯಮವೋ ?

ಶ್ರೀ ಎಸ್.ಆರ್. ಬೊಮ್ಮಾಯಿ.—ಇದು ೩೩ಳಿ ವೇಲೆ ಹೇಳುತ್ತಿರುವುದು.

ಶ್ರೀ ಎನ್. ಎಂ. ಅಡ್ಯಂತಾಯ.—ನಾನು ಅವತ್ತು ಕೊಟ್ಟಿದ್ದು ಕಾಲಿಂಗ್ ಅಟೆನ್‌ಷನ್. ೩೩ಳಿ ಅಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಕಾಲಿಂಗ್ ಅಟೆನ್‌ಷನ್ ಆದರೆ ಲಿಖಿತವಾಗಿ ಉತ್ತರ ಕೊಟ್ಟಿಲ್ಲ. ನನ್ನ ಹತ್ತಿರ ಕಾಪಿ ಇಲ್ಲ, ನಾಳೆ ಕೊಡುತ್ತೇನೆ.

IV ಗೈರು ಹಾಜರಾಗಲು ಅನುಮತಿ

ಶ್ರೀ ಎಂ. ವೀರಪ್ಪ ಮೊಯಿಲಿರವರು ಸದನಕ್ಕೆ ಗೈರು ಹಾಜರಾಗಲು ಅನುಮತಿ ನೀಡುವ ಬಗ್ಗೆ.

ಅಧ್ಯಕ್ಷರು.—ಈಗ ಒಂದು ಪ್ರಕಟಣೆ ಇದೆ.

"ವಿಧಾನ ಸಭಾ ಸದಸ್ಯರಾದ ಶ್ರೀ ಎಂ. ವೀರಪ್ಪ ಮೊಯಿಲಿಯವರು ದಿನಾಂಕ ೧೧-೩-೧೯೮೭ ರಿಂದ ೨೩-೩-೧೯೮೭ ರವರೆಗೆ ಸದರಿ ವಿಧಾನ ಸಭಾ ಉಪವೇಶನಗಳಿಗೆ ಗೈರು ಹಾಜರಾಗಲು ಅನುಮತಿಯನ್ನು ಕೋರಿ ಪತ್ರ ಬರೆದಿರುತ್ತಾರೆ."

"ಶ್ರೀ ಎಂ. ವೀರಪ್ಪ ಮೊಯಿಲಿಯವರಿಗೆ ಮೇಲೆ ಸೂಚಿಸಿದ ಅವಧಿಯಲ್ಲಿ ವಿಧಾನ ಸಭೆಯ ಉಪವೇಶನಗಳಿಗೆ ಗೈರುಹಾಜರಾಗುವುದಕ್ಕೆ ಅನುಮತಿ ಕೊಡಬೇಕೆಂದು ಸದನವು ಅಪೇಕ್ಷಿಸುತ್ತದೆಯೇ" ?

(ಮಾನ್ಯ ಸದಸ್ಯರು ಯಾರೂ ವಿರೋಧ ವ್ಯಕ್ತಪಡಿಸಲಿಲ್ಲ.)

ಅಧ್ಯಕ್ಷರು.—ಗೈರುಹಾಜರಾಗಲು ಶ್ರೀ ಎಂ. ವೀರಪ್ಪಮೊಯಿಲಿಯವರಿಗೆ ಅನುಮತಿ ನೀಡಲಾಗಿದೆ. ಈಗ ಬೇಡಿಕೆಯ ಮುಂದಿನ.

V ವಿತ್ತೀಯ ಕಾರ್ಯ ಕಲಾಪಗಳು.

೧೯೮೭-೮೮ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ ಮತ್ತು ಮಂಜೂರಾತಿ ಅಭಿಯಾಚನೆ ಕ್ರಮಾಂಕ ೨೩ - ರಾಜ್ಯದ ಅಬಕಾರಿ.

ಶ್ರೀ ಹೆಚ್.ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಅಬಕಾರಿ ಮಂತ್ರಿಗಳು):—

ಮಾನ್ಯ ಅಧ್ಯಕ್ಷರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಾಜ್ಯದ ಅಬಕಾರಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೫,೨೬,೯೬,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು